ಡೊಂಬ – ಡೊಂಬಗಿತ್ತಿ ಕಂಬ ಹುಗಿದು ಮಿಣಿ ಕಟ್ಟುವ ಸಿದ್ಧತೆ ಮಾಡುತ್ತಿದ್ದಾಗ ಹುಡುಗ ತಲ್ಲೀನನಾಗಿ ಡೋಲು ಬಾರಿಸುತ್ತಿದ್ದ, ತುಂಬ ಸೂಟಿಯಾದ ಪುಟಾಣಿ ಹುಡುಗಿ ನೆಲದ ಮೇಲೆ ಸಣ್ಣ ಪುಟ್ಟ ಕಸರತ್ತುಗಳನ್ನು ಮಾಡಿ ತೋರಿಸುತ್ತಿದ್ದಳು. ರಾವ್‌ಜೀಭಾಯಿಯ ಲಕ್ಷ್ಯವೆಲ್ಲ ಡೋಲು ಬಾರಿಸುವ ಹುಡುಗನ ಮೇಲೇ. ಹುಡುಗ ತುಂಬ ಮುದ್ದಾಗಿದ್ದ, ಸೊಂಟದ ಕೆಳಗೆ ತೊಡೆಯನ್ನು ಬರಿಯ ಒಂದು ಗೇಣು ಉದ್ದಕ್ಕೆ ಮುಚ್ಚುವಷ್ಟು ಗಿಡ್ಡವಾದ ಕಂದು ಬಣ್ಣದ ಚಡ್ಡಿಯನ್ನು ಬಿಟ್ಟರೆ ಬೋಳು ಮೈಮೇಲೆ ಇನ್ನೊಂದು ಅರಿವೆಯಿರಲಿಲ್ಲ. ಎದೆಯ ಮೇಲೆ ಕರಿಯ ದಾರಕ್ಕೆ ಕಟ್ಟಿ ತೂಗಿದ ತಾಮ್ರದ ತಾಯಿತ, ತಲೆಗೆ ಹತ್ತವಾಗಿ ಕತ್ತರಿಸಿದ ಗಿಡ್ಡ ಕೂದಲು. ಮೈಯಲ್ಲಿ ಮಸ್ತಿ ಬಂದವನ ಹಾಗೆ ಡೋಲು ಬಾರಿಸುತ್ತಿದ್ದವನ ಕಪ್ಪು ಗೊಂಬೆಗಳುಳ್ಳ ಕಣ್ಣುಗಳಲ್ಲಿ ವಿಲಕ್ಷಣ ಹೊಳಪು. ಹೇಹೇ ಎಂದು ಕೇಕೆ ಹಾಕುತ್ತ ನಗುವಾಗ ಎಡಗಲ್ಲದಲ್ಲಿ ಆಳವಾದ ಗುಳಿ ಬೀಳುತ್ತಿತ್ತು. ತಮ್ಮ ಮನೆಯ ಮಂದಿ ಮಾತ್ರವಲ್ಲದೆ ಆಜುಬಾಜಿನ ಮನೆಯವರೂ ಕೂಡಿ ಹತ್ತಿಪ್ಪತ್ತು ಜನ ಅಂಗಳದಲ್ಲಿ ಸೇರಿ ಡೊಂಬರಾಟ ನೋಡುವುದಲ್ಲಿ ಗರ್ಕರಾಗಿದ್ದಾಗ ರಾವ್‌ಜೀಭಾಯಿಯ ಲಕ್ಷ್ಯವೆಲ್ಲ ಆ ಹುಡುಗನ ಮೇಲೆ; ನೆಟ್ಟ ನೋಟದಿಂದ ನೋಡುತ್ತ ಕೂತಲ್ಲೇ ಸಂಶಯವೇ ಉಳಿಯಲಿಲ್ಲ! ತಮ್ಮ ಹುಡುಗನದೇ ವಯಸ್ಸು. ವಯಸ್ಸು ಮಾತ್ರವಲ್ಲ ರೂಪ ಕೂಡ. ಅವನ ಹಾಗೇ ಎಡಗಲ್ಲದಲ್ಲಿ ಕುಳಿ! ಎಲ್ಲಕ್ಕೂ ಮಿಗಿಲಾಗಿ ಡೊಂಬನಿಗಾಗಲೀ ಅವನ ಹೆಂಡತಿಗಾಗಲೀ ಈ ರೂಪವಿರಲಿಲ್ಲ, ಅಷ್ಟೇಕೆ, ಹತ್ತು ವರ್ಷದ ಹುಡುಗನ ತಂದೆತಾಯಿಗಳಾಗುವಷ್ಟು ದೊಡ್ಡ ಪ್ರಾಯದವರೂ ಅಲ್ಲ. ಇವರೇ ಕದ್ದಿರಲಾರರು, ಹಾಗಿದ್ದರೆ ಇಲ್ಲಿಗೆ ಬರುತ್ತಿರಲೇ ಇಲ್ಲ. ಕದ್ದವರು ಇವರಿಗೆ ಮಾರಿರಬಹುದು...''

ಜಾಧವ ಒಮ್ಮೆಲೇ ಮಾತು ನಿಲ್ಲಿಸಿದ. ಯಾಕೆ ನಿಲ್ಲಿಸಿದ ಎಂದು ಕೂಡಲೇ ಗೊತ್ತಾಗಲಿಲ್ಲವಾದರೂ ಕೇಳುತ್ತಿದ್ದ ಮುದುಕ–ಮುದುಕಿಯರಿಗೆ ತುರ್ತು ಅದೇ ಬೇಕಾಗಿದ್ದಂತಿತ್ತು. ದಣಿವು ಹತ್ತಿದಂತಾಗಿ ಇಬ್ಬರ ಬಾಯಿಂದಲೂ ದೊಡ್ಡ ಸುಸ್ಕಾರ ಹೊರಟಿತು. ಧೋಂಡೂ ಹಾಗೂ ಪಾರ್ವತಿ ಕೂಡ ತದೇಕಚಿತ್ತರಾಗಿ ಕೇಳುತ್ತ ಕುಳಿತಿದ್ದರು. ಮುಂದೆ? ಹುಡುಗ ಸಿಕ್ಕನೆ? ಎಂದು ಕೇಳುವ ಭಾವದಿಂದ ಬಿಗಿಗೊಂಡು ಕೂತವರಿಗೆ ಕತೆ ಮತ್ತೆ ಮುಂದುವರೆಯುವ ಲಕ್ಷಣ ತೋರದೇ ಇದ್ದಾಗ ತುಂಬ ನಿರಾಸೆಯಾಯಿತು. ಕತೆ ಕೇಳುವವರಲ್ಲಿ ಇವರೂ ಸಾಮೀಲಾಗಿದ್ದುದನ್ನು ಈಗ ಗುರುತಿಸಿದವನ ಹಾಗೆ ಜಾಧವ ಕುಡಿಯಲು ನೀರು ಬೇಕು ಎನ್ನುವ ಸನ್ನೆ ಮಾಡಿದಾಗ ಧೋಂಡೂ–ಪಾರ್ವತಿ ಇಬ್ಬರೂ ಅಡುಗೆಯ ಮನೆಯ ಕಡೆಗೆ ಧಾವಿಸಿದರು. ಸೂರ್ಯನಿನ್ನೂ ಮುಳುಗಿರದಿದ್ದರೂ ಎಂಟನೇ ಮಜಲೆಯ ದಿವಾಣಖಾನೆಯಿಂದ ಕಾಣುವ ಆಕಾಶದಿಂದ ಬಹಳ ಕೆಳಗಿಳಿದಿದ್ದ. ಹೊರಗೆ ಬೆಳಕಿದ್ದೂ ಹಾಲಿನೊಳಗೆ ಮಬ್ಬುಗತ್ತಲೆಯಾಗತೊಡಗಿತ್ತು. ಅಡುಗೆ ಮನೆಯತ್ತ ಸಾಗಿದ ಧೋಂಡೂ ಹಾಲಿನಲ್ಲಿಯ ದೀಪ ಬೆಳಗಲು ಹೋದಾಗ ಜಾಧವನೇ ಬೇಡವೆಂದ. ಜಿತೇಂದ್ರ ಶಹ ಮೊದಲ ಭೇಟಿಯಲ್ಲಿ ಚೂರುಚೂರಾಗಿ ಹೇಳಿದ ಸಂಗತಿಗಳು, ಪೊಲೀಸ್ ಖಾತೆಗೆ ನೆರವಾಗಬಲ್ಲಂಥ ಒಂದು ಪುಟದಷ್ಟು ಸಂಕ್ಷಿಪ್ತವಾದ ಲಿಖಿತ ವರದಿ ಇವಿಷ್ಟೇ ಇಷ್ಟೊಂದು ಜೀವಂತವಾದ ಕತೆಯಾಗತೊಡಗಿದಾಗ ಸ್ವತಃ ಜಾಧವನೇ ಥಕ್ಕಾದ. ಪೊಲೀಸ್ ಖಾತೆಯಂಥ ರೂಕ್ಷವಾದ ಖಾತೆಯಲ್ಲಿ ಕೆಲಸ ಮಾಡುವ ತನ್ನಂಥ ತನ್ನಲ್ಲಿ ಕೂಡ ಈ ಪರಕಾಯ ಪ್ರವೇಶ–ಶಕ್ತಿ ಸಂಚರಿಸಿದ ಅದ್ಭುತ ಘಟನೆ ದಿಗಿಲುಗೊಳಿಸಿತ್ತು. ಈ ಅಸಾಧಾರಣ ಅನುಭವವನ್ನು ಬೆಳಕು ಕೆಡಿಸಬಹುದೆಂಬ ಭಯವಾಗಿರಬೇಕು, ಧೋಂಡೂ ತಂದುಕೊಟ್ಟ ನೀರು ಕುಡಿಯುತ್ತಿದ್ದ ಹಾಗೆ,